ಹೀಗೆ ಗಡಗಡ ನಡುಗಿಸುವುದೆಂದರೆ?' 'ಪಾಪ ಆ ಕುಟುಂಬಸ್ಥ ಹಮೀದನ ಜೊತೆ ಮದುವೆ ಮಾಡ್ಸಿ ಅಂತ ದುಂಬಾಲು ಬಿದ್ದರೆ, ಅದು ಆಗಿಹೋಗುವ ಮಾತೇ?' 'ಅವಳು ಕಳೆದುಕೊಳ್ಳೋದು ಏನೂ ಇಲ್ಲ, ಅವರಿಗೆ ಇದು ಪ್ರತಿಷ್ಠೆಯ ವಿಷಯ, ಅದನ್ನು ಗೊತ್ತುಮಾಡ್ಕೊಂಡು ಅಷ್ಟು ಹಾರಾಡ್ತಾಳೆ' ಅಂದ್ರು ಮೇಡಂ. ನನಗೆ ಇನ್ನೊಮ್ಮೆ ದಿಗಿಲಾಯಿತು. 'ಒಂದು ಕೆಲಸ ಮಾಡಬಹುದು ಅನಿಸುತ್ತದೆ. ಹಮೀದನಿಂದ ಏನಾದರೂ ಸ್ವಲ್ಪ ಹಣದ ಸಹಾಯ ಕೊಡಿಸಬಹುದೋ ಯೋಚಿಸಬಹುದು' ನಮ್ಮ ಚರ್ಚೆಯಲ್ಲಿ ಈ ವಿಷಯ ಬರುತ್ತಲೇ ಮೇಡಂ ನಡುವೆ ಬಾಯಿ ಹಾಕಿ, 'ಬೈಲಾದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನು ಹೇಳಿದ್ದಾರೆ ನೋಡಿ, ಅಲ್ಲಿಯ ಅದಿನಿಯಮ '2.ಬಿ'ದಲ್ಲಿ ಸಂತ್ರಸ್ತೆಗೆ ಹಣ ಆಸ್ತಿ ಮುಂತಾದ ಆಮಿಷ ತೋರಿಸಿ ಬಾಯಿ ಮುಚ್ಚಿಸುವ ಹಾಗಿಲ್ಲ ಎಂಬ ನಿಯಮವಿದೆ' ಅಂತ ಓದಿದ ನೆನಪು ಅಂತ ಎಚ್ಚರಿಸಿದರು.

'ಇಬ್ಬರೂ ಪರಸ್ಪರ ಒಪ್ಪಿಕೊಂಡೇ ಸೇರಿದ್ದರಿಂದ ಇದು ಲೈಂಗಿಕ ದೌರ್ಜನ್ಯ ಅಲ್ಲ ಅಂತ ವರದಿ ತಯಾರಿಸುವುದಾ ಮೇಡಂ?' ಅಂತ ನನ್ನೊಳಗೇ ಎದ್ದ ಪ್ರಶ್ನೆಯನ್ನು ನಾನು ಎತ್ತಿದೆ. 'ಹೌದು, ಹಾಗೇ ಬರೆಯಿರಿ ಶಶಿರೇಖಾ, ಮತ್ತು ಸಬೀನಾ ದೂರಿನಲ್ಲಿ ಮಾಡಿದ ಯಾವುದೇ ಆರೋಪಗಳಿಗೆ ಸರಿಯಾದ ಸಾಕ್ಷಿಯಿರುವುದಿಲ್ಲ, ಎಂದು ಸೇರಿಸಿ' ಅಂದರು. 'ದುಡ್ಡು ಅಂತಸ್ತು ಕಣ್ಣಿಗೆ ಬಿದ್ದು ಕೆಲವು ಹುಡುಗಿಯರು ಹೀಗೆಯೂ ಮಾಡುವುದಿದೆ, ನಾನೂ ಕಂಡಿದ್ದೇನೆ ಅಲ್ಲಲ್ಲಿ' ಅಂದರು ಡೇಸಿ. 'ಸುಲಭದಲ್ಲಿ ಸಿರಿವಂತಿಕೆ ಅನುಭವಿಸಲು ನಮ್ಮ ಬಡ ಹೆಣ್ಣುಮಕ್ಕಳಿಗೆ ಇಂಥದ್ದೊಂದು ಅಡ್ಡ ಆಪ್ಷನ್ ಇರ್ತದೆ; ನಮ್ಮ ಎನ್‌ಜಿಓದಲ್ಲೂ ಇವೆ ಇಂಥ ಕೇಸ್‌ಗಳು' ಅಂದರು ರಜಿಯಾ. 'ತನ್ನ ಮದುವೆಯಾಗಿಲ್ಲ ಅಂತ ಸುಳ್ಳು ಹೇಳಿ ಅವಳ ದೋಸ್ತಿ ಮಾಡಿರಬೇಕು ಈತನೇ. ನಂತರ ಅವಳು ಮದುವೆ ಮಾತು ತೆಗೆದ ಕೂಡಲೇ ಇವನಿಗೆ ತನ್ನ ಹೆಂಡತಿ ಮಕ್ಕಳ ನೆನಪಾಗಿದೆ' ಅಂದರು ಡೇಸಿ. 'ಹಾಗಿದ್ದರೂ ಪರಸ್ಪರ ಒಪ್ಪಿ ಲೈಂಗಿಕತೆಯಲ್ಲಿ ಪಾಲ್ಗೊಂಡದ್ದನ್ನು ದೌರ್ಜನ್ಯ ಅಂತ ಹೇಗೆ ಭಾವಿಸುವುದು?' ಅಂದರು ಶಶಿರೇಖಾ ವರದಿಯನ್ನು ಬರೆಯುತ್ತಲೇ. ನಮ್ಮೆಲ್ಲರ ಮನಸ್ಸಿನಲ್ಲೂ ಅವಳದೇ ತಪ್ಪು ಎಂಬ ಭಾವ ಸ್ಫುರಿಸಿ ಗಟ್ಟಿಗೊಳ್ಳುವ ಹಂತದಲ್ಲಿ ನಾನು, 'ಫ್ಯಾಕ್ಟರಿಯ ಎದುರು ಹಮೀದನ ತಮ್ಮ ಮತ್ತು ಡ್ರೈವರ್ ಶಿವು ಹೊಡೆದಿದ್ದನ್ನು ಹಲ್ಲೆ ಅಂತೇನಾದರೂ ತೋರಿಸಿ ಸಬೀನಾಗೆ ಸ್ವಲ್ಪ ಪರಿಹಾರ ಕೊಡಿಸಬಹುದಾ ಮೇಡಂ?' ಅನ್ನುತ್ತ ಮೇಡಂ ಕಡೆ ನೋಡಿದೆ. 'ಯಸ್, ಅದನ್ನು ಮಾಡಬಹುದಿತ್ತು. ಆದರೆ ಆತ ಅವಳ ಮುಖವೇ ನೋಡದಿದ್ದಷ್ಟು ದ್ವೇಷ ತುಂಬಿಕೊಂಡಿದ್ದಾನೆ. ಅಂಥವ ಏನಾದರೂ ಪರಿಹಾರ ಕೊಡುತ್ತಾನೆ ಅಂತ ನನಗನ್ನಿಸುವುದಿಲ್ಲ' ಅಂದರು.

ಇನ್ನೇನು ಕೇಸು ಕ್ಲೋಸ್ ಮಾಡಿ ಈ ದೂರಿನಲ್ಲಿ ಹುರುಳಿಲ್ಲ ಮತ್ತು ಆಪಾದನೆಗೆ ಸಂತ್ರಸ್ತೆಯ ಯಾವ ಸಾಕ್ಷಿಗಳೂ ತಾಳೆಯಾಗುತ್ತಿಲ್ಲ ಅಂತ ವರದಿ ತಯಾರಿಸಲು ಶಶಿರೇಖಾಗೆ ಮೇಡಂ ಆಜ್ಞಾಪಿಸಬೇಕು ಅನ್ನುವುದರೊಳಗೇ, ಇನ್ನೊಮ್ಮೆ ಒಳ ಓಡಿ ಬಂದ ಸಬೀನಾ, ಮೇಡಂ ಬಳಿ ಹೋಗಿ ನಿಂತು, 'ನಾನು ಕೊನೆಯ ಬಾರಿ ಮುಖತಃ ಹಮೀದರೊಂದಿಗೆ ಮಾತಾಡಬೇಕು ಮೇಡಂ, ಎದುರಾ ಬದರಾ ಮಾತಾಡಬೇಕು, ನನಗೆ ಅವರ ಮನಸ್ಸಲ್ಲೇನಿದೆ ಅಂತ ಗೊತ್ತಾಗಬೇಕು. ಇದಕ್ಕೆ ಒಂದೇ ಒಂದು ಅವಕಾಶ ಮಾಡ್ಕೊಡಿ ಮೇಡಂ ಪ್ಲೀಸ್. ಒಮ್ಮೆ ಅವರ ಕಣ್ಣಲ್ಲಿ ಕಣ್ಣಿಟ್ಟು ಮಾತಾಡ್ತೇನೆ. ಅವರೇ ಹೇಳಲಿ, ನಿನ್ನ ಬಳಿ ಮಾತಾಡಲು ನನಗೆ ಮನಸ್ಸಿಲ್ಲ, ನೀನು ನನಗೆ ಬೇಕಾಗಿಲ್ಲ ಅಂತ. ಅಷ್ಟಾದ್ರೆ ನಾನು ಸುಮ್ಮನೆ ಮನೆಗೆ ಹೋಗಿ ಬಿಡ್ತೇನೆ. ಆ ನಂತ್ರ ಅವರ ಬದಿ ಮುಖ ಹಾಕಿಯೂ ಕೂಡೋದಿಲ್ಲ' ಅಂತ ಗೋಗರೆಯುತ್ತ ಮೇಡಂ ಅವರ ಕಾಲಬಳಿಯಲ್ಲೇ ಕೂತು ಹಟ ಶುರುಮಾಡಿದಳು.

'ಎಲ್ಲ ಮುಗಿದಿದೆಯಲ್ಲಮ್ಮ, ನಿನ್ನ ತಪ್ಪುಗಳ ದೊಡ್ಡ ಫೈಲನ್ನೇ ಅವರೂ ತಂದು ತೋರಿದ್ದಾರೆ. ನಿನ್ನಷ್ಟಕ್ಕೇ ನೀನು ದುಡಿದು ತಿಂದು ಸ್ವಾಭಿಮಾನದಿಂದ ಬದುಕಿದ್ರೆ ನಿನಗೆ ಇಂಥ ಅಪ್ವಾದ ಬರ್ತಿತ್ತೇ?'